## <u>ಗಣಿ ಮತ್ತು ಭೂವಿಜ್ಞಾನ ಇಲಾಖೆ</u>

## <u>ಅಂತರ್ಜಲ ಘಟಕ, ಹಾಸನ</u>

ಮಾಹಿತಿ ಪಡೆಯಲು ಹಕ್ಕು ಅಧಿನಿಯಮ -2005 ಕೇಂದ್ರ ನಿಯಮಗಳ ಸೆಕ್ಷನ್ 4(1)(ಎ) ರಂತೆ ಈ ಕಛೇರಿಯು ಹಾಸನ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ಕಛೇರಿ ವ್ಯಾಪ್ತಿಯ ಕಾರ್ಯಕ್ರಮಗಳು ಹಾಗೂ ಇನ್ನಿತರ ಮಾಹಿತಿಗಳು ಸಾರ್ವಜನಿಕರಿಗೆ ಲಭ್ಯವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಲಾಗಿದೆ ಅವುಗಳನ್ನು ಅಂತರ್ಜಾಲದಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ.

**<u>ಸೆಕ್ಷನ್ 4(1)(ಬಿ):-</u>** ಪ್ರಕಾರ ಈ ಕಛೇರಿಯ ಮಾಹಿತಿ ಪಡೆಯುವ ಹಕ್ಕು ಅಧಿನಿಯಮ 2005 ಕೇಂದ್ರ ನಿಯಮ -22 ರನ್ವಯ ಸಂಸ್ಥೆಯ ರಚನೆ ಕಾರ್ಯಕ್ರಮಗಳು, ಸಂಸ್ಥೆಯ ಕಾರ್ಯ ಸೂಚಿಗಳನ್ನು ಹಾಗು ವಿವರಗಳನ್ನು ಸಾರ್ವಜನಿಕವಾಗಿ ಕೆಳಕಂಡಂತೆ ಪ್ರಚಾರ ಪಡಿಸಿದೆ.

**ಕಛೇರಿಯ ಮುಖ್ಯಸ್ಥರು**

**<u>ಹಿರಿಯ ಭೂ ವಿಜ್ಞಾನಿ</u>**

<u>ತಾಂತ್ರಿಕ ವಿಭಾಗ</u>

ಭೂವಿಜ್ಞಾನಿ - 2

ಸಹಾಯಕ ಕೊರೆಯುವರು- 1

<u>ಆಡಳಿತ ವಿಭಾಗ</u>

ಪ್ರಥಮ ದರ್ಜೆ ಸಹಾಯಕ -1

ದ್ವಿತೀಯ ದರ್ಜೆ ಸಹಾಯಕರು-1

ವಾಹನ ಚಾಲಕ -1

ಗ್ರೂಪ್ ಡಿ ನೌಕರರು- 3

ಹಿರಿಯ ಭೂವಿಜ್ಞಾನಿ ಅಂತರ್ಜಲ ವಿಭಾಗ ಕಛೇರಿಗೆ ಒಟ್ಟು 10 ಹುದ್ದೆಗಳು ನಿಯೋಜಿಸಿದ್ದು ಎಲ್ಲಾ 10 ಹುದ್ದೆಗಳು ಭರ್ತಿ ಆಗಿರುತ್ತವೆ.

## ಸೆಕ್ಷನ್ 4(1)ಬಿ(1):- ಪ್ರಕಾರ ಸಂಸ್ಥೆಯ ಹೆಸರು ಕಾರ್ಯಕ್ರಮಗಳು ಹಾಗೂ ಕರ್ತವ್ಯಗಳು

### ಕಾರ್ಯಗಳು:-

ಜಿಲ್ಲೆಯಲ್ಲಿನ ಅಂತರ್ಜಲ ಲಭ್ಯತೆ, ಬಳಕೆ, ಗುಣಧರ್ಮ ತಾಂತ್ರಿಕ ಹಾಗೂ ಕೃತಕ ಅಂತರ್ಜಲ ಮರುಬರಣಗಳ ಬಗ್ಗೆ ಅಧ್ಯಯನ ಹಾಗೂ ರಚನೆಗಳ ನಿರ್ಮಾಣ ಕೈಗೊಳ್ಳುವುದು.

**ಎ) ಅಂತರ್ಜಲ ಲಭ್ಯತೆ ಬಳಕೆ** : ಅಧ್ಯಯನ ವಿಷಯವಾಗಿ ಜಿಲ್ಲೆಯಲ್ಲಿ ಗುರುರ್ತಿಸಲ್ಪಟ್ಟ ಅಧ್ಯಯನ (ವೀಕ್ಷಣಾ) ಬಾವಿ ಕೋಳವೆ ಬಾವಿ ಮತ್ತು ರಾಷ್ಟ್ರೀಯ ಜಲವಿಜ್ಞಾನ ಯೋಜನೆಯಿಂದ ಕೊಳವೆ ಬಾವಿಗಳಿಗೆ ಅಳವಡಿಸಿದ ಸ್ವಯಂ ಚಾಲಿತ ಜಲಮಟ್ಟ ದಾಖಲು ಉಪಕರಣಗಳಿಂದ ಪ್ರತಿ ತಿಂಗಳು 3 ಅಥವಾ 4 ನೇ ವಾರದಲ್ಲಿ ಎಲ್ಲಾ ವೀಕ್ಷಣ ಬಾವಿಗಳ ಮಾಸಿಕ ಜಲಮಟ್ಟ ದಾಖಲಿಸಿ, ಅಂತರ್ಜಲ ಮಟ್ಟ ಏರಳಿತ ವರದಿ ಸಿದ್ದಗೊಳಿಸಿ ಕೇಂದ್ರ ಕಛೇರಿ ರಾಜ್ಯ ಬರ (ಡ್ರಾಟ್‌ೕ)ಮಾನೀಟರಿಂಗ್ ಕೋಶ, ಇವರಿಗೆ ವರದಿ ಸಲ್ಲಿಸುವುದು.

ಬಿ) **ಗುಣಧರ್ಮ ಅಧ್ಯಯನ** :- ಈ ವಿಷಯವಾಗಿ ವೀಕ್ಷಣ ಬಾವಿಗಳ ಅಥವಾ ಹತ್ತಿರಿದ ಬಾವಿ/ ಕೊಳವೆ ಬಾವಿದ ನೀರಿನ ಮಾದರಿಗಳನ್ನು ಮಳೆಗಾಲಕ್ಕೆ ಮುಂಚೆ ಸಂಗ್ರಹಿಸಿ (ಬೇಸ್ ಸ್ಯಾಂಪಲ್ ) ಇಲಾಖೆ ರಸಾಯನ ಪ್ರಯೋಗ ಶಾಲೆಯಲ್ಲಿ ವಿಶ್ಲೇಷಣೆ ಮಾಡಿಸಿ, ಅಧ್ಯಯಾನ ಮಾಡುವುದು. **ಬಿಐಎಸ್** ನಿಗಧಿಪಡಿಸಿದ ಪ್ರಮಾಣಕ್ಕಿಂತ ಹೆಚ್ಚು ಲವಣಾಂಶಗಳುಳ್ಳ ನೀರಿನ ಮಾದರಿಗಳನ್ನು ವರ್ಷಕಾಲದ ನಂತರ (ಟ್ರಂಡ್) ಮತ್ತೊಮ್ಮೆ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡುಸುವುದ್ದು.

**ಸಿ) ತಾಂತ್ರಿಕ ಸಲಹೆ** : ಸರ್ಕಾರಿ, ಸರ್ಕಾರೇತರ ಅರ್ಜಿದಾರರು ಕುಡಿಯುವ ನೀರಿಗಾಗಿ, ವ್ಯವಸಾಯಕ್ಕಾಗಿ ಅಥವಾ ಕೈಗಾರಿಕ ಉಪಯೋಗಕ್ಕಾಗಿ ಬಾವಿ/ಕೊಳವೆ ಬಾವಿ ತೋಡಿಸುವವರು/ಕೊರೆಸುವವರು ಅರ್ಜಿಸಲ್ಲಿಸಿದಲ್ಲಿ ಸದರಿ ಜಮೀನುಗಳನ್ನು / ಸ್ಥಳಗಳನ್ನು ಭೂ ವೈಜ್ಞಾನಿಕ / ಭೂಭೌತ ವಿಧಾನದಿಂದ ಸಮೀಕ್ಷಿಸಿ ಸ್ಥಳಾಯ್ಕೆ ಮಾಡಲಾಗುವುದು.

**ಡಿ) ಕಿರುಜಲಾನಯನ ಸಮೀಕ್ಷೆ** : ಪತ್ರಿ ವರ್ಷ ಅಧ್ಯಯನ ಕ್ಷೇತ್ರ ಕಾರ್ಯಕ್ರಮದಡಿ ಕಿರುಜಲಾನಯನವನ್ನು ಆಯ್ಕೆಮಾಡಿ ಸದರಿ ಕಿರಿಜಲಾನಯನದಲ್ಲಿರುವ ಮುಣ್ಣು ,ಶಿಲಾರಚನೆ ಅಂತರ್ಜಲ ಭರಣ (ಜಲಧರ ) ಅಧ್ಯಯನ ಅಂಗವಾಗಿ, ಸದರಿ ಪ್ರದೇಶದಲ್ಲಿರುವ ನೀರಾವರಿ ಬಾವಿ ಅಥವಾ ಕೊಳವೆಬಾವಿಗಳ ಆಳ ಕೇಸಿಂಗ್ ಪೈಪು, ಪಂಪು ಸಾಮರ್ಥ್ಯ ಬೆಳೆಮಾದರಿ, ಬೆಳೆ ವಿಸ್ತೀರ್ಣ ಪಟ್ಟಿ ಮಾಡಿ, ಬಾವಿಗಳ ಇರುವಿಕೆಯನ್ನು 1.50,000 ಟೋಪೋಶೀಟ್ನಲ್ಲಿ ಗುರುತು ಮಾಡಿ ಅಧ್ಯಯನ ಮಾಡಲಾಗುವುದು.

**ಇ) ವಿಶೇಷ ಅಧ್ಯಯನ** : ಪ್ರತಿ ವರ್ಷ ಅಂತರ್ಜಲ ಗುಣಧರ್ಮಕ್ಕೆ ಸಂಬಂಧಿಸಿಂದ ವಿಷಯದ ಬಗ್ಗೆ, ಕೇಂದ್ರ ಕಛೇರಿ ಅನುಮೋದಿಸಿ ನೀಡಿದ ಪ್ರದೇಶದ ಅಧ್ಯಯನ ಕೈಗೊಂಡು, ಸಂಗ್ರಹಿಸಿದ ನೀರಿನ ಮಾದರಿಗಳನ್ನು ಇಲಾಖಾ ರಸಾಯನ ಪ್ರಯೋಗ ಶಾಲೆಯಿಂದ ವಿಶ್ಲೇಷಣೆ ಮಾಡಿಸಿ ಅಧ್ಯಯನ ಮಾಡಲಾಗುವುದು.

**ಎಫ್) ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳ ನಿರ್ಮಾಣ** :- ರಾಷ್ಟ್ರೀಯ ಜಲಶಾಸ್ತ್ರ ಅನುಧಾನ ಲಭ್ಯತೆ ಅನುಗುಣವಾಗಿ, ಕೇಂದ್ರ ಕಛೇರಿಯಿಂದ ನಿಗಧಿಪಡಿಸಿದ ಅನುದಾನದಲ್ಲಿ ಅಂತರ್ಜಲ ಕೃತಕ ಮರುಪೂರೈಕೆ ರಚನೆಗಳಗಾಗಿ ಸೂಕ್ತ ಸ್ಥಳಾಯ್ಕೆ ತಂತ್ರಿಕ ಮತ್ತು ಆಡಳಿತ ಅನುಮೋದನೆ ಪಡೆದ. ನಂತರ ಪ್ರಯೋಗಿಕವಾಗಿ ಇಲಾಖಾವತಿಯಿಂದ ರಚನೆ ನಿರ್ಮಾಣ ಕೈಗೊಳ್ಳುವುದು.

**ಜಿ) ಎಸ್‌ಸಿ/ಎಸ್‌ಟಿಪಿ ಕಾರ್ಯಕ್ರಮದಡಿ ಅಂತರ್ಜಲ ಕೃತಕ ಮರು ಪೂರೈಕೆ ರಚನೆ ನಿರ್ಮಾಣ:-**

ಎಸ್‌ಸಿ/ಎಸ್‌ಟಿಪಿ ಫಲಾನುವಿಗಳ ನೀರಾವರಿ ಕೊಳವೆ ಬಾವಿಗಳ ಅಂತರ್ಜಲ ನಿರಂತರ ಲಭ್ಯತೆಗಾಗಿ, ಸದರಿ ಫಲಾನುಭವಿಗಳ ಜಮೀನುಗಳ ಹತ್ತಿರ ಅಂತರ್ಜಲ ಕೃತಕ ಮರುಪೂರೈಕೆ ರಚನೆ ನಿರ್ಮಾಣ ಮಾಡುವುದು.

**ಹೆಚ್) ಜನಜಾಗೃತಿ ಶಿಬಿರ** :- ಶಾಲಾ ಬಾಲ/ಬಾಲಕಿಯರಲಿ ರೈತರಲ್ಲಿ, ಸಾರ್ವಜನಿಕರಲ್ಲಿ ಅಂತರ್ಜಲ ಮಿತಿಬಳಕೆ, ಸದ್ಬಳಕೆ, ಗುಣಮಟ್ಟ ಕಾಪಾಡುವ ಬಗ್ಗೆ, ಮಳೆನೀರು ಕೊಯ್ಲು ಹಾಗೂ ಅಂತರ್ಜಲ ಕೃತಕ ಮರುಪೂರಣ ಬಗ್ಗೆ ಜನಜಾಗೃತಿ ಮೂಡಿಸಲು ವರ್ಷದಲ್ಲಿ ಒಂದು/ ಎರಡು ಶಿಬಿರಗಳನ್ನು ಹಮ್ಮಿಕೊಳ್ಳುವುದು.

**ಐ) ವಿಫಲ ಬಾವಿಗಳ ತನಿಖೆ** :- ಆರ್ಥಿಕ ಸಂಸ್ಥೆಗಳಂದ ನೆರವು ಪಡೆದು ನಿರ್ಮಿಸಿದ ನೀರಾವರಿ ಬಾವಿಗಳ ವಿಫಲತೆ ಬಗ್ಗೆ ಬಾವಿ ತಪಾಸಣೆ ಕೈಗೊಂಡು, ತನಿಖಾ ವರದಿಯನ್ನು ವಿಫಲ ಬಾವಿ ತ್ರಿ ಸದಸ್ಯ ಸಮಿತಿ ಅಧ್ಯಕ್ಷರಿಗೆ ಸಲ್ಲಿಸುವುದು.

**2) ಸೆಕ್ಷನ್ 4(1) ಬಿ ( ii)ಪ್ರಕಾರ ಅಧಿಕಾರಿಗಳ ಕರ್ತವ್ಯಗಳು** :

ಹಿರಿಯ ಭೂ ವಿಜ್ಞಾನಿಗಳ ಕರ್ತವ್ಯಗಳು :-

1. ಹಿರಿಯ ಭೂ ವಿಜ್ಞಾನಿಯವರು ತಾಂತ್ರಿಕ ಹಾಗೂ ಆಡಳಿತ ನಿಯಂತ್ರಿಸುವುದು.
2. ಅಂತರ್ಜಲ ಸಂಭಂದಿತ ವಿಷಯಗಳಿಗೆ ತಾಂತ್ರಿಕ ಸಲಹೆ ನೀಡುವುದು.
3. ಆರ್ಥಿಕ ಸಂಸ್ಥೆಗಳಂದ ಬಂದ ವಿಫಲ ಭಾವಿ ಅರ್ಜಿಗಳ ಸ್ಥಳ ತಪಾಸಣೆ.
4. ಸಮಿತಿಗಳ ಕಾರ್ಯಗಳಲ್ಲಿ ಪಾಲ್ಗೋಳ್ಳುವುದು ಮತ್ತು ವಹಿಸಿದ ಕರ್ತವ್ಯಗಳನ್ನು ಮಾಡುವುದು.
5. ಜಿಲ್ಲಾಪಂಚಾಯತ್ ಸಭೆಗಳಗೆ ಹಾಗೂ ಇನ್ನಿತರ ಸಭೆಗಳಗೆ ಹಾಜರಾಗುವುದು.

6. ನಿರ್ದೇಶಕರ ಕಛೇರಿಯಿಂದ ಕರೆದ ಪ್ರಗತಿ ಪರೀಶಿಲನಾ ಸಭೆಗಳಿಗೆ ಹಾಜರಾಗುವುದು ಹಾಗೂ ಸೂಚಿಸಿದ ಇತರೆ ತಾಂತ್ರಿಕ ಕೆಲಸಗಳನ್ನು ನಿರ್ವಹಿಸುವುದು.
7. ಜಿಲ್ಲಾಧಿಕಾರಿಗಳು ಸ್ರಚಿಸಿದ ವಿಶೇಷ ಕಾರ್ಯಗಳಾದ, ಚುನಾವಣೆ, ಪರೀಕ್ಷಾ ಉಸ್ತುವಾರಿ, ಬರ/ಪ್ರವಾಸ ನಿರ್ವಹಣಾ ಕಾರ್ಯಾಗಳು ನಿರ್ವಹಿಸುವುದು.
8. ಕಛೇರಿ ಪೀಠೋಪಕರಣಗಳು ಲೇಖನ ಸಾಮಾಗ್ರಿಗಳ ಖರೀದಿ ಮತ್ತು ನಿರ್ವಹಣೆ.
9.ಕಛೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರ ಸೇವಾವಿಷಯಗಳು ತರಬೇತಿ ವ್ಯವಸ್ಥೆ/ ರಜೆ ಮಂಜೂರಾತಿ ಬಗ್ಗೆ.
10. ವಾರ್ಷಿಕ ವೇತನ ಬಡ್ತಿ/ ಮುಂಗಡಗಳ ಮಂಜೂರಾತಿ ಇತ್ಯಾದಿ.
11. ವಾಹನ ದುರಸ್ತಿಗೆ ಸಂಬಂಧಿಸಿದಂತೆ ಸಾಮಗ್ರಿಗಳ ಖರೀದಿ ಮತ್ತು ದುರಸ್ತಿ ವಿಲೇವಾರಿಗೆ ಸಂಬಂಧಿಸಿದಂತೆ ಕ್ರಮ ಕೈಗೊಳುಳುವುದು. ಕಛೇರಿಯ ವಾರ್ಷಿಕ ತಾಪಸಣೆ ವರದಿ ಮತ್ತು ಕ್ರಮ ಕೈಗೊಳ್ಳುವುದು. ಸಾರ್ವಜನಿಕ ಕುಂದು ಕೊರತೆ ಸಂಬಂಧ ಸ್ವೀಕರಿಸಿದ ಅರ್ಜಿ ವಿಲೇವಾರಿ
12. ಅಧಿಕಾರಿ ಮತ್ತು ನೌಕರರ ಪ್ರವಾಸ ಕಾರ್ಯಕ್ರಮ ಅನುಮೋದನೆ / ದಿನಚರಿ ವಿಮರ್ಶೆ.
13. ಮಾಹಿತಿ ಹಕ್ಕು ಅಧಿನಿಯಮ-2005 ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಣೆ.
14. ಕಛೇರಿ ವಾರ್ಷಿಕ ಆಯವ್ಯಯದ ಬಗ್ಗೆ ಕ್ರಮ ವಹಿಸುವುದು. ಆಡಿಟ್ ವರದಿಗಳ ಮೇಲೆ ಕ್ರಮ ಕೈಗೊಳ್ಳುವುದು.
15. ಕಛೇರಿಗೆ ಸಂಬಂಧಿಸಿದಂತೆ ಇತರೆ ಎಲ್ಲಾ ಕೆಲಸಗಳ ಮೇಲ್ವಿಚಾರಣೆ
16. ಕಛೇರಿ ವಾರ್ಷಿಕ ಆಯವ್ಯಯದ ಬಗ್ಗೆ ಕ್ರಮ ವಹಿಸುವುದು.
17. ಆಡಿಟ್ ವರದಿಗಳ ಮೇಲೆ ಕ್ರಮ ಕೈಗೊಳ್ಳುವುದು.
18. ಕಛೇರಿಗೆ ಸಂಬಂಧಿಸಿದಂತೆ ಇತರೆ ಎಲ್ಲಾ ಕೆಲಸಗಳ ಮೇಲ್ವಿಚಾರಣೆ.

**ಅ) ಭೂ ವಿಜ್ಞಾನಿಗಳ ಕರ್ತವ್ಯಗಳು ;- ( 2) ಹುದ್ದೆಗಳು'**

1. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಗುರ್ತು ಮಾಡಿದ ಎಲ್ಲಾ ವೀಕ್ಷಣಾ ಬಾವಿಗಳ ಮಾಸಿಕ ಜಲಮಟ್ಟ ಮಾಪನ.
2. ವೀಕ್ಷಣಾ ಬಾವಿಗಳಂದ ವರ್ಷದಲ್ಲಿ 3 ಬಾವಿ ನೀರಿನ ಮಾದರಿಗಳನ್ನು ಸಂಗ್ರಹಿಸಿ, ವಶ್ಲೇಷಣೆಗಾಗಿ ರಸಾಯನ ಪ್ರಯೋಗ ಶಾಲೆ, ಮೈಸೂರುಗೆ ಕಳುಹಿಸುವುದು.
3.ಅರ್ಜಿದಾರರಿಂದ ಬಂದ ಅರ್ಜಿಗಳ ಸ್ಥಳ ತಪಾಸಣೆಯನ್ನು ಭೂ ವೈಜ್ಞಾನಿಕ/ ಭೂಭೌತ ಸಮೀಕ್ಷೆ

ಕೈಗೊಂಡು ತಾಂತ್ರಿಕ ಸಲಹೆ ನೀಡುವುದು..

4. ಆರ್ಥಿಕ ಸಂಸ್ಥೆಗಳಿಂದ ಬಂದ ವಿಫಲಬಾವಿ ಅರ್ಜಿಗಳ ಸ್ಥಳ ತಪಾಸಣೆ ಮಾಡಿ ಹಿರಿಯ ಭೂ ವಿಜ್ಞಾನಿ ಮುಖಾಂತರ ವರದಿ ಸಲ್ಲಿಸುವುದು.
5. ಮಾಸಿಕ ಅಂತರ್ಜಲ ಮಟ್ಟ ಅಳತೆಗಳನ್ನು ವಹಿಯಲ್ಲಿ ದಾಖಲಿಸುವುದು.
6. ವಿಶ್ಲೇಷಣಾ ನಂತರ ನೀರಿನ ಮಾದರಿಗಳ ವರದಿಯನ್ನು ವಹಿಯಲ್ಲಿ ದಾಖಲಿಸುವುದು.
7. ಕ್ಷೇತ್ರ ಕಾರ್ಯಕ್ರಮ ದಡಿ ಕೈಗೊಂಡ ಕಿರು ಜಲಾನಯಾನ ಪ್ರದೇಶ ಸಮೀಕ್ಷೆ ನಡೆಸುವುದು ಮತ್ತು ಸಮೀಕ್ಷೆ ಪೂರ್ಣಗೊಂಡ ನಂತರ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.
8. ವಿಶ್ಲೇಷ ಅಧ್ಯಯನ ದಡಿ ಕೈಗೊಂಡ ಸಮೀಕ್ಷೆ ಕೈಗೊಳ್ಳುವುದು ಮತ್ತು ವರದಿ ಸಿದ್ದಗೊಳಿಸಿ ಕೇಂದ್ರ ಕಛೇರಿಗೆ ಸಲ್ಲಿಸುವುದು.
9. ಹಿರಿಯ ಭೂ ವಿಜ್ಞಾನಿಯವರ ಅನುಪಸ್ಥಿತಿಯಲ್ಲಿ ಕಛೇರಿಯ ದೈನಂದಿನ ಕಾರ್ಯಗಳನ್ನು ನಿರ್ವಹಿಸುವುದು.

**ಈ) ಸಹಾಯಕ ಬೈರಿಗೆದಾರರು :-** ವಿಕ್ಷಣಾ ಬಾವಿಗಳ ನಿರ್ವಹಣೆ ಕಛೇರಿ ಸಿಬ್ಬಂದಿಯಾವರ ಪ್ರಯಾಣ ಭತ್ಯೆ ತಯಾರಿಕೆ ಹಾಗೂ ಹಿರಿಯ ಭೂ ವಿಜ್ಞಾನಿಯವರು ಸೂಚಿಸಿರುವ ಇತರೆ ಯಾವುದೇ ಕೆಲಸದ ನಿರ್ವಹಣೆ ವಿನ್ಯಾಸ, ನಕ್ಷೆ, ಅಂದಾಜು ಪಟ್ಟಿ ತಯಾರಿಕೆ ಮತ್ತು ನಿರ್ಮಾಣ, ಜಲಮಾದರಿ ಸಂಗ್ರಹಣೆ ಮತ್ತು ಕಛೇರಿಯ ಇಂಜಿನಿಯರಿಂಗ್ ವಿಭಾಗದಲ್ಲಿನ ಸಮಾಗ್ರಿಗಳ ನಿರ್ವಹಣೆ ಮತ್ತು ಕಛೇರಿ ಅಧಿಕಾರಿಗಳು ವಹಿಸುವ ಇತರೆ ತಾಂತ್ರಿಕ ಕೆಲಸಗಳ ನಿರ್ವಹಣ

**ಇ) ಪ್ರಥಮ ದರ್ಜೆ ಸಹಾಯಕ :-1 ಹುದ್ದೆ**

ಕಛೇರಿ ಅಧಿಕಾರಿ ಮತ್ತು ನೌಕರರ ಸೇವಾವಹಿ ನಿರ್ವಹಣೆ ಕಛೇರಿಗೆ ಸಂಬಂದಿಸಿದ ವೇತನ ಬಿಲ್ಲುಗಳ ತಯಾರಿಕೆ, ವಾರ್ಷಿಕ ಆಯವ್ಯಯ ತಯಾರಿಕೆ ಅನುಬಂಧ-ಬಿ, ವೈಯಕ್ತಿಕ ಕಡತ ನಿರ್ವಹಣೆ, ಆಡಳಿತ ಶಾಖೆಗೆ ಸಂಬಂದಿಸಿದಂತೆ ಸರ್ಕಾರಿ ಮತ್ತು ಅರೆ ಸರ್ಕಾರಿ ಪತ್ರಗಳಿಗೆ ಉತ್ತರಿಸುವುದು, ಮಾಹಿತಿ ಹಕ್ಕು ಅಧಿನಿಯಮದ ಅರ್ಜಿಗಳ ವಿಲೇವಾರಿ ಮತ್ತು ಇತ್ಯಾದಿ.

**ಉ) ದ್ವಿತೀಯ ದರ್ಜೆ ಸಹಾಯಕ ( 1 ಹುದ್ದೆಗಳು) :-** ಕಛೇರಿಗೆ ಬರುವ ಪತ್ರಗಳ ಸ್ವೀಕೃತಿ ಮತ್ತು ರವಾನೆ ನಿರ್ವಹಣೆ, ಅಧಿಕಾರಿ ಮತ್ತು ನೌಕರರ ಪ್ರವಾಸ ಭತ್ಯೆ ತಯಾರಿಕೆ, ಡಿ. ಸಿ ಬಿಲ್ಲು ತಯಾರಿಕೆ, ಉಗ್ರಾಣ ನಿರ್ವಹಣೆ, ಸೇವಾ ಅಂಚೆ ಚೀಟಿ ಲೆಕ್ಕ ನಿರ್ವಹಣೆ ಮತ್ತು ಇತ್ಯಾದಿ.

**ಋ) <u>ವಾಹನ ಚಾಲಕ ( 1 ಹುದ್ದೆಗಳು) :-</u>** ವಾಹನ ಚಾಲನೆ, ದುರಸ್ತಿ ಕಾರ್ಯಗಳು ವಾಹನವನ್ನು ಸುಸ್ಥಿಯಲ್ಲಿ ಕಾಪಾಡುವುದು.

ಎ) **<u>ಗ್ರೂಪ್ 'ಡಿ' ನೌಕರರು ( 3 ಹುದ್ದೆಗಳು) :-</u>** ಕಛೇರಿ ಕಾವಲು ಕೆಲಸ, ಅಧಿಕಾರಿ ಮತ್ತು ನೌಕರರು ಹೇಳುವ ಕೆಲಸಗಳ ನಿರ್ವಹಣೆ, ಟಪಾಲು ನೀಡುವುದು, ಖಜಾನೆ ಕೆಲಸಗಳು, ಕಛೇರಿಯನ್ನು ಶುಚಿಯಾಗಿಡಲು ಕ್ರಮ ಕೈಗೊಳ್ಳುವುದು ಮತ್ತು ಇತ್ಯಾದಿ.

**<u>ಸೆಕ್ಷನ್ 4(1) ಬಿ ( iii)</u> ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳು :-** ಪ್ರತಿ ತಿಂಗಳು ಅಳತೆ ಮಾಡಿದ ಅಂತರ್ಜಲ ಮಟ್ಟದ ಏರಳಿತ ವರದಿಯನ್ನು ಭೂ ವಿಜ್ಞಾನಿಗಳು ಸಿದ್ದಪಡಿಸಿ ವರದಿಯನ್ನು ಅಪರ ನಿರ್ದೇಶಕರು, ಅಂತರ್ಜಲ ಗಣಿ ಮತ್ತು ಭೂ ಭೂ ವಿಜ್ಞಾನ ಇಲಾಖೆ, ಬೆಂಗಳೂರು ಗೆ ಮತ್ತು ನಿರ್ದೇಶಕರು ಡ್ರಾಟ ಮಾನಿಟರಿಂಗ್ ಕೋಶ, ಬೆಂಗಳೂರುಗಳಿಗೆ ಮುಂದಿನ ತಿಂಗಳು 5 ನೇ ತಾರೀಖುನೊಳಗೆ ಕಳುಹಿಸಲಾಗುವುದು.

ನೀರಿನ ಮಾದರಿಗಳನ್ನು ಸಂಗ್ರಹಿಸಿದ ನಂತರ, ಮುಂದಿನ ತಿಂಗಳು ರಸಾಯನ ವಿಶ್ಲೇಷಣಾ ವರದಿ ಫಾರಂಗಳಲ್ಲಿ ಮಾದರಿಗಳ ಮಾಹಿತಿ ಭರ್ತಿಮಾಡಿ, ಪ್ರಯೋಗ ಶಾಲೆಗೆ ಮಾದರಿಗಳೊಂದಿಗೆ ಫಾರಂಗಳನ್ನು ಕಳುಹಿಸಲಾಗುವುದು. ತಾಂತ್ರಿಕ ಅಧಿಕಾರಿಗಳು ಕೈಗೊಂಡ ಸ್ಥಳ ಪರಿಶೀಲನಾ ವರದಿಗಳನ್ನು ಸಿದ್ದಗೊಳಿಸಿ, ಹಿರಿಯ ಭೂ ವಿಜ್ಞಾನಿ ಮುಖಾಂತರ ಅರ್ಜಿದಾರರಿಗೆ ರವಾನಿಸಲಾಗುವುದು.

ರಾಷ್ಟೀಯ ಜಲಶಾಸ್ತ್ರ ಯೋಜನೆ ಅಡಿ ಕೇಂದ್ರ ಕಛೇರಿಯಿಂದ ನಿಗದಿಪಡಿಸಿದ ಅತಿ ಹೆಚ್ಚು ಅಂತರ್ಜಲ ಭಳಕೆ ತಾಲ್ಲೂಕುಗಳಲ್ಲಿ ಅಚಿತರ್ಜಲ ಮಿತಿ ಬಳಕೆ, ಗುಣಸಂರಕ್ಷಣೆ ಮಳೆನೀರು ಕೊಯ್ಲು ಬಗ್ಗೆ ಜನ ಜಾಗೃತಿ ಮೂಡಿಸಲು ಪ್ರಜಾಪ್ರತಿನಿಧಿಗಳ ಅಧ್ಯಕ್ಷತೆಯಲ್ಲಿ, ಹಾಗೂ ಜಿಲ್ಲಾ / ತಾಲ್ಲೂಕ್ ಅಧಿಕಾರಿಗಳ ಉಪಸ್ಥಿತಿಯಲ್ಲಿ ಕಾರ್ಯಕ್ರಮದಲ್ಲಿ ನಡೆಸಲಾಗುವುದು. ವಿಷಯ ನಡೆಸಲಾಗುವುದು. ಕಾರ್ಯಕ್ರಮದಲ್ಲಿ ವಿಷಯ ತಜ್ಞರಿಂದ ಮತ್ತು ಪ್ರಗತಿ ಪರರೈತರರಿಂದ ಹಾಗೂ ಅಂತರ್ಜಲ ಸಂಭಂದ ಇತರೆ ಇಲಾಖೆ ಅಧಿಕಾರಿಗಳಂದ ಭಾಷಣ ಏರ್ಪಡಿಸಲಾಗುತ್ತೆ.

**4) ಸೆಕ್ಷನ್ 4(1) ಬಿ (iV) ಅದರ ಕಾರ್ಯಗಳ ನಿರ್ವಾಹಣೆಗೆ ಅದು ರೂಪಿಸಿದ ಸೂತ್ರಗಳು :-**

ಕಛೇರಿಗೆ ಅನುಮೋದಿಸಿದ ಆಯವ್ಯಯ ಪ್ರಕಾರ ಯೋಜನೇತರ ಅನುದಾನದಲ್ಲಿ ವೇತನೇತರ ಶೀರ್ಷಿಕೆ ಅಡಿ ಕಛೇರಿ ವೆಚ್ಚ, ಕಛೇರಿ ಕಟ್ಟಡ ಬಾಡಿಗೆ, ಲೇಕ್ಕನ ಸಾಮಾಗ್ರಿ ಮತ್ತು ಇಲಾಖೆ ವಾಹನ ಇಚಿಧನಕ್ಕಾಗಿ ಕರ್ನಾಟಕ ಆರ್ಥಿಕ ಸಂಹತೆ, ಸಾದಿಲ್ವಾರು, ವೆಚ್ಚದ ಕೈಪಿಡಿ ಮತ್ತು ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳು ಸುತ್ತೋಲೆಗಳು ಮತ್ತಿತರ ಸೂಚನೆಗಳನ್ನು ಅನುಸರಿಸಲಾಗುತ್ತೆ.

5) **ಸೆಕ್ಷನ್ 4(1) ಬಿ ( V** ) : ಕಛೇರಿ ಕಾಮಗಾರಿಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ಉದ್ಯೋಗಗಳು ಬಳಸುವ ನಿಯಮಗಳು, ವಿನಿಮಯಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು.

ಕಛೇರಿ ಪ್ರಕಾರ್ಯಗಳು, ಕರ್ತವ್ಯಗಳು, ಮತ್ತು ಅಧಿಕಾರಗಳನ್ನು ನಿರ್ವಹಿಸುವಸಲುವಾಗಿ ಈ ಕೆಳಕಂಡ ನಿಯಮಗಳನ್ನು ಅನುಸರಿಸಲಾಗುತ್ತಿದೆ.

1. ಕೆ.ಸಿ.ಎಸ್.ಆರ್.
2. ಕರ್ನಾಟಕ ಆರ್ಥಿಕ ಸಂಹಿತೆ.
3. ಕರ್ನಾಟಕ ಸಾಧಿಲ್ವಾರು ವೆಚ್ಚದ ಕೈಪಿಡಿ
4. ಕಛೇರಿ ಕಾರ್ಯ ವಿಧಾನ ಕೈಪಿಡಿ
5. ಕರ್ನಾಟಕ ಖಜಾನೆ ಸಂಹಿತೆ
6. ಅಂತರ್ಜಲದ ಬಗ್ಗೆ ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳು
7. ಕರ್ನಾಟಕ ಪಾರದರ್ಶಕ ಅದಿನಿಯಮ 2005

**ಸೆಕ್ಷನ್ 4(1) ಬಿ ( Vi) ಕಛೇರಿ ಹೊಂದಿರುವ ಹಾಗೂ ನಿಯಂತ್ರದಲ್ಲಿರುವ ದಾಸ್ತಾವೇಜುಗಳು ಪ್ರವರ್ಗಗಳ ವಿವರ ಪಟ್ಟಿ**

ಸಾಮಾನ್ಯ ರಶೀದಿ ಪುಸ್ತಕಗಳು

ಚೆಕ್ ಸ್ವೀಕೃತಿ ಪತ್ರಗಳು

ಸ್ವೀಕೃರಿಸಲಾದ ಚೆಕಕ್ಗಳ ರಿಜಸ್ಟರ್

ಸ್ವೀಕೃತಿಗಳ ಮತ್ತು ಸಂದಾಯಗಳ ವರ್ಗೀಕೃತ ರಿಜಸ್ಟರ್

ಆಯವ್ಯಯ ನಮೂನೆ

ನಗದು ಪುಸ್ತಕಗಳು

ಸಾಮಾನ್ಯ ನಗದು ಪುಸ್ತಕಗಳು

ಖಜಾನೆಗೆ ಹಣ ಕಟ್ಟಿದ ರಿಜಸ್ಟರ್

ಲೆಕ್ಕ ಪತ್ರಗಳ ಮಾಸಿಕ ವಿವರಣೆ

ತೆರಿಗೆ ಸಂಗ್ರಹಣೆಗಳ ದಿನ ಪುಸ್ತಕ

ಖಜಾನೆಗೆ ಹಣ ಸಚಿದಾಯ ಮಾಡುವುದಕ್ಕಾಗಿ ಚಲನ್

ನಿಯತಕಾಲಿಕ ವೇತನ ಬಡಿ ಪ್ರಮಾಣ ಪತ್ರ

ಅಂತಿಮ ವೇತನ ಪ್ರಮಾಣ ಪತ್ರ

ಸಿಬ್ಬಂದಿ ಪ್ರಮಾಣ ಭತ್ಯೆ ಬಿಲ್

ಸಾದಿಲ್ವಾರು ಬಿಲ್ಲುಗಳ ವಿವರ

ಖಾಯಂ ಮುಂಗಡಗಳಿಂದ ಖರ್ಚು ಮಾಡಲಾದ ವೆಚ್ಚದ ಲೆಕ್ಕ ಪತ್ರ

ಸ್ಟಾಂಪ್ ಲೆಕ್ಕ

ಹಾಜರಿ ಪಟ್ಟಿ

ಕಾಮಗಾರಿಗಳ ರಿಜಸ್ಟರ್

ಆಳತೆ ರಿಜಸ್ಟರ್

ಅನುದಾನಗಳ ರಿಜಸ್ಟರ್

ಗ್ರಂಥಾಲಯದಲ್ಲಿರುವ ಪುಸ್ರಕಗಳ ಪಟ್ಟಿ

ಪುಸ್ತಕಗಳನ್ನು ನೀಡುವ ಸ್ವೀಕೃತಿ ವಹಿ

| | | | |
|---|---|---|---|
| 1 | ಭೂಭೌತ ಅರ್ಜಿಗಳ ಆದ್ಯತೆ ವಹಿ | 2 | ವಿಫಲ ಬಾವಿ ಕಡತ |
| 3 | ಭೂ ವೈಜ್ಞಾನಿಕ ಅರ್ಜಿಗಳ ಕಡತ | 4 | ಭೂ ಭೌತ ಸರ್ವೇಕ್ಷಣೆಯ ವಹಿ<br>(ಜಿ.ಪಿ.ಐ ರಿಜಿಸ್ಟರ್ ) |
| 5 | ಅಂತರ್ಜಲ ಲಭ್ಯತೆ ಕುರಿತಾದ ಉಪಗ್ರಹ ಛಾಯಾ ಚಿತ್ರ ನಕಾಶೆಗಳು. | 6 | ವಿಫಲ ಬಾವಿ ಸಲಹೆಯ ವಹಿ |
| 7 | ಅಂತರ್ಜಲ ಮೌಲೀಕರಣಕ್ಕೆ ಸಂಬಂದಿಸಿದ ಕಡತ | 8 | ಇತರೆ ಕಛೇಗಳಿಂದ ಸಂಗ್ರಹಿಸಿದ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳ ಮಾಹಿತಿಕಡತ |
| 9 | ಟೋಫೋಶೀಟ್ ಗಳು | 10 | ಇತರೆ ಇಲಾಖೆಗಳಿಂದ ಸಂಗ್ರಹಿದ ತಾಂತ್ರಿಕ ಮಾಹಿತಿಗಳ ಕಡತ |
| 11 | ಕ್ಷೇತ್ರ ಕಾರ್ಯಕ್ರಮದ ರಾಸಾಯನಿಕ ವಿಶ್ಲೇಷಣೆ ವಹಿ | 12 | ಮಾಸಿಕ ವರದಿ ಕಡತ |

| | | | |
|---|---|---|---|
| 13 | ಮಳೆ ಮಾಪನ ದಾಖಲಾತಿ ವಹಿ | 14 | ಕ್ಷೇತ್ರ ಕಾರ್ಯಕ್ರಮದ ಅಧ್ಯಯನ ಬಾವಿಗಳ ಜಲಮಟ್ಟ ದಾಖಲಾತಿ ವಹಿ |
| 15 | ಅಧ್ಯಯನ ಬಾವಿಗಳ ಜಲಮಟ್ಟ ದಾಖಲಾತಿ ವಹಿ | 16 | ಕ್ಷೇತ್ರ ಕಾರ್ಯಕ್ರಮದ ಕಡತ |
| 17 | ರಾಸಾಯನಿಕ ವಿಶ್ಲೇಷಣೆ ವಹಿ | 18 | ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳ ಪತ್ರ ವ್ಯವಹಾರ ವಹಿ |
| 19 | ಅಂತರ್ಜಲ ಕೃತಕ ಪೂರೈಕೆ ರಚನೆಗಳ ಕಚ್ಚಾ ಸಾಮಗ್ರಿಗಳ ದಾಸ್ತಾನು ವಹಿ. | 20 | ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳ ಅಳತೆ ಪುಸ್ತಕ. |
| 21 | ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳ ನಕ್ಷೆಗಳ ಮತ್ತು ವಿವರಗಳ ಕಡತ. | 22 | ಭೂ ವೈಜ್ಞಾನಿಕ ನಕಾಶೆಗಳು ಮತ್ತು ಮೂಲ ಟ್ರೇಸಿಂಗ್ ಹಾಳೆಗಳು |

7) **ಸೆಕ್ಷನ್ 4(1) ಬಿ ( Vii) :- ಇಲಾಖೆ ಕಾರ್ಯನೀತಿಯ ರಚನೆ ಅಥವಾ ಅದರ ಅನುಉಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೋಡನೆ ಸಾಮಲೋಚಿಸಲು ಅಥವಾ ಅವರ ಪತ್ರಿ ನಿರ್ಧಾರವಿರಿವಚಿತೆ ಮಾಡಲು ಇರುವಚಿತ ಯಾವುದೇ ವ್ಯವಸ್ಥೆಯ ವಿವರಗಳನ್ನು** ಅನ್ವಯವಾಗುವುದಿಲ್ಲ

8) **ಸೆಕ್ಷನ್ 4(1) ಬಿ ( Viii) :- ಮಂಡಳಗಳು, ಪರಿಷತ್ತುಗಳು , ಸಮಿತಿಗಳು, ಅಥವಾ ಇತರ ಕಾರ್ಯಗಳು ಮತ್ತು ಅದರ ಭಾಗವಾಗಿ ಅಥವಾ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇವರು ಅಥವಾ ಹೆಚ್ಚು ವ್ಯಕ್ತಿಗಳನೋಳಗೋಂಡ ಮಂಡಳಗಳು, ಪರಷತ್ತು, ಸಮಿತಿಗಳ ಮತ್ತು ಇತರ ನಿಗಮಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರಿತ್ತವೆಯೋ ಅಥವ ಅಂತಹ ಸಭೆಗಳ ನಡವಳಗಳು ಸಾರ್ವಜನಿಕರಿಗೆ ದೊರೆಯುತ್ತವೆಯೋ ಎಂಬುದರ ವಿವರ ಪಟ್ಟಿ.**

ಈ ಕೆಳಗಡೆ ನಮೂದಿಸಿದ ಸಮಿತಿಗಳಗೆ ಹಿರಿಯ ಭೂ ವಿಜ್ಞಾನಿಗಳು ಸದಸ್ಯರಾಗಿರುತ್ತಾರೆ

ಅ) ವಿಫಲ ಬಾವಿ ತ್ರಿ ಸದಸ್ಯ ಸಮಿತಿ, ಅಧ್ಯಕ್ಷರು, ತಾಹಸೀಲ್ದಾರರು,

ಆ) ಬ್ಲಾಕ್ ಲೇವಲ್ ಬ್ಯಾಂಕರ್ಸ್ ಕಮಿಟಿ, ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕ ಅಧೀಕಾರಿಗಳು, ಜಿಲ್ಲಾಪಂಚಾಯಿತಿ, ಹಾಸನ

ಇ) ಕುಡಿಯುವ ನೀರಿನ ಭವಣೆ ಪರಿಹಾರ ಸಮಿತಿ, ಅಧ್ಯಕ್ಷರು, ಜಿಲ್ಲಾಧಿಕಾರಿಗಳು, ಹಾಸನ.

ಈ) ಚನ್ನಪಟ್ಟಣ ಕೆರೆ ಅಭಿವೃದ್ಧಿ ಕಾಮಗಾರಿಗಳಗೆ ಸಂಭಂದಿಸಿದಂತೆ ಸಮನ್ವಯ ಸಮಿತಿ ,ಮತ್ತು ತಾಂತ್ರಿಕ ಸಮಿತಿ

ಉ) ಡಗ್‌ವೆಲ್ ರೀಚಾಜ್ ಸಮಿತಿ, ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು, ಜಿಲ್ಲಾಪಂಚಾಯಿತಿ, ಹಾಸನ್

ಊ) ಹೇಮಾವತಿ ಮತ್ತು ಯಗಚಿ ಯೋಜನೆಗಳಡಿಯಲ್ಲಿ ಶೀತಪೀಡಿತ ಗ್ರಾಮಗಳನ್ನು ಗುತುರಿಸಿ ಸ್ಥಳಾಚಿತರಿಸಲು ಶಿಫಾರಸ್ಸು ಮಾಡುವ ಬಗ್ಗೆ. ರಚಿಸಿರುವ ಸಮಿತಿ ಸದಸ್ಯರು

೯) **ಸೆಕ್ಷನ್ 4(1) ಬಿ (ix) :-** ಈ ಕಛೇರಿಯ ಅಧಿಕಾರಿಗಳ ಮತ್ತು ನೌಕರರ ನಿರ್ದೇಶಕೆಯ ವಿವರಗಳು

ಹಿರಿಯ ಭೂ ವಿಜ್ಞಾನಿ ಅಂತರ್ಜಲ ಕಛೇರಿಯಲ್ಲಿ ಕಾರ್ಯನಿರ್ವ.ಹಿಸುತ್ತಿರುವ ಅಧಿಕಾರಿ ಮತ್ತು ನೌಕರರ ವಿವರಗಳು ಈ ಕೆಳಕಂಡತೆ ಇವೆ

| **ಕ್ರ.ಸಂ** | **ಅಧಿಕಾರಿ ಮತ್ತು ನೌಕರರು ಶ್ರೀ/ ಶ್ರೀಮತಿ/ ಕುಮಾರಿ** | **ಪದನಾಮ** | **ಸ್ವಂತ ಊರು** | **ದೂರವಾಣಿ ಸಂಖ್ಯೆ** |
|---|---|---|---|---|
| 1 | ಶ್ರೀ ಸಿ. ಹನುಮಂತ ರಡ್ಡಿ | ಹಿರಿಯ ಭೂ ವಿಜ್ಞಾನಿ | ಬಳ್ಳಾರಿ | 9449623034 |
| 2 | ಕುಮಾರಿ ದ್ವಿತೀಯ | ಭೂ ವಿಜ್ಞಾನಿ | ಚಿಕ್ಕಮಗಳೂರು | 9480220400 |
| 3 | ಕು॥ ಸುಧಾ | ಭೂವಿಜ್ಞಾನಿ | ಶಿವಮೊಗ್ಗ | 9964944135 |
| 4 | ಜಗದೀಶ್ | ಪ್ರ..ದ.ಸ | ಹಾಸನ | 9880564800 |
| 5 | ಜಗದೀಶ್ | ದ್ವಿ. ದ .ಸ | ಹಾಸನ | ಇಲ್ಲ |
| 6 | ಝುಖಾವುಲ್ಲಾ ಖಾನ್ | ಸಹಾಯಕ ಕೊರೆಯುವವರು | ತುಮಕೂರು | 984446823 |
| 7 | ಜವರಯ್ಯ | ವಾಹನ ಚಾಲಕ | ಹಾಸನ | ಇಲ್ಲ |
| 8 | ಮಂಜೆಗೌಡ | ಡಿ ಗುಂಪು | ಹಾಸನ | ಇಲ್ಲ |
| 9 | ನಿಂಗಯ್ಯ | ಡಿ ಗುಂಪು | ಹಾಸನ | ಇಲ್ಲ |
| 10 | ಬೋಜೆಗೌಡ | ಡಿ ಗುಂಪು | ಹಾಸನ | 9740667378 |

10) **<u>ಸೆಕ್ಷನ್ 4(1) ಬಿ (X)</u> ಕಛೇರಿ ವಿನಿಮಯಗಳಲ್ಲಿ ಉಪ ಬಂಧಿಸಿರುವಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಅದರ ಪತ್ರಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಗೌರವಧನದ ವಿವರಗಳು**

| ಕ್ರ.ಸಂ | ಹೆಸರು | ಪದನಾಮ | ಮೂಲ ವೇತನ | ದಿನಭತ್ಯೆ | ಮನೆಬಾಡಿಗೆ ಭತ್ಯೆ | ವೈದ್ಯಕಿಯ ು ಭತ್ಯೆ | ಒಟ್ಟು ಮೊತ್ತ |
|---|---|---|---|---|---|---|---|
| | ಶ್ರೀ ಸಿ. ಹನುಮಂತರೆಡ್ಡಿ | ಹಿರಿಯ ಭೂ ವಿಜ್ಞಾನಿ | 25050 | | | | |
| | ಕುಮಾರಿ ದ್ವಿತೀಯ | ಭೂ ವಿಜ್ಞಾನಿ | 12000 | 4560 | 1080 | – | 17.640 |
| | ಕು|| ಸುಧಾ | ಭೂವಿಜ್ಞಾನಿ | 11400 | 43332 | 1026 | – | 16,758 |
| | ಜಗದೀಶ್ | ಪ್ರ..ದ.ಸ | 7275 | 2765 | 665 | 50 | 10,745 |
| | ಹೆಚ್. ಪಿ ಜಗದೀಶ್ | ದ್ವಿ. ದ .ಸ | 9500 | 3610 | 850 | 50 | 14015 |
| | ಝಖಾವುಲ್ಲಾ ಖಾನ್ | ಸಹಾಯಕ ಕೊರೆಯುವವರು | 12300 | 4674 | 1107 | 50 | 18131 |
| | ಜವರಯ್ಯ | ವಾಹನ ಚಾಲಕ | 12300 +90 | 4674 | 1107 | 50 | 18221 |
| | ಮಂಜೆಗೌಡ | ಡಿ ಗುಂಪು | 9500+100 | 3610 | 855 | 50 | 14,115 |
| | ನಿಂಗಯ್ಯ | ಡಿ ಗುಂಪು | 8600 | 3268 | 774 | 50 | 12692 |
| | ಬೋಜೇಗೌಡ | ಡಿ ಗುಂಪು | 6950 | 2641 | 626 | 50 | 10267 |

11) **<u>ಸೆಕ್ಷನ್ 4(1) ಬಿ (xi) :-</u>** ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಾವಿತಿ, ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳು ವರದಿಯನ್ನು ಸೂಚಿಸಿ, ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯವನ್ನು

ಈ ಕಛೇರಿ ಕಾರ್ಯಗಳಲ್ಲಿ ಯೋಜನೆ ಅಡಿ ಯಾವುದೇ ಅನುದಾನ ಬಿಡುಗಡೆ ಯಾಗಿರುವುದಿಲ್ಲ.

12) **<u>ಸೆಕ್ಷನ್ 4(1) ಬಿ (xii)</u>** ಹಂಚಿಕ ಮಾಡಲಾದ ಮೆಬಲಗನ್ನೊಳಗೊಂಡ, ಸಹಾಯ ಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳನ್ನು.

ಪ್ರಸ್ತುತ ಯಾವುದು ಇರುವುದಿಲ್ಲ.

13) **<u>ಸೆಕ್ಷನ್ 4(1) ಬಿ (xiii)</u>** ಕಛೇರಿ ನೀಡಿರುವ ರಿಯಾತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳನ್ನು / ಅನ್ವಯಿಸುವುದಿಲ್ಲ.

14) **<u>ಸೆಕ್ಷನ್ 4(1) ಬಿ (xiv)</u> ಕಛೇರಿ ಬಳ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹಿತಿಗೆ ಸಂಭಂದಿಸಿದ ವಿವರಗಳು**

ಗಣಕಯಂತ್ರದ Ground water data entry System ನಲ್ಲಿ ಈ ಕೆಳಗಿನ ಮಾಹಿತಿ ಲಭ್ಯವಿದೆ.

ಜಿಲ್ಲೆಯ ಅಧ್ಯಯನ ಬಾವಿಗಳ ವಿವರಗಳು ಮತ್ತು ಜಲಮಟ್ಟ ದಾಖಲಾತಿ.

ಅಧ್ಯಯನ ಬಾವಿಗಳಿಂದ ಸಂಗ್ರಹಿಸಿದ ನೀರಿನ ಮಾದರಿಗಳ ವಿಶ್ಲೇಷಣಾ ಮಾಹಿತಿ. ಜಿಲ್ಲೆಯ ಭೂ ವೈಜ್ಞಾನಿಕ , ಹಳ್ಳಗಳ, ಮಣ್ಣಿನ , ಭೂ ಉಪಯೋಗದ, ಗ್ರಾಮಗಳ ವಿವರಗಳ ಜಿಯೋಮಾರ್ಫಾಲಜಿ ಹಾಗೂ ಸಂಬಂಧಿಸಿದ ನಕಾಶೆಗಳು ಜಿ.ಐ.ಎಸ್ ನಲ್ಲಿ ಲಭ್ಯವಿದೆ. ಗಣಕಯಂತ್ರದ ಎಕ್ಸೆಲ್ ನಲ್ಲಿ ಅಂತರ್ಜಲ ಮೌಲೀಕರಣಕ್ಕೆ ಸಂಬಂಧಿಸಿದಂತೆ ವಿವರಗಳು ಲಭ್ಯವಿದೆ.

15) **<u>ಸೆಕ್ಷನ್ 4(1) ಬಿ (xv)</u> ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕರ್ತವ್ಯ ವೇಳಾ ಮಾಹಿತಿ ಪಡೆಯುಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು**

ಸಾರ್ವಜನಿಕ ಉಪಯೋಗಕ್ಕೆ ಯಾವುದೇ ರೀತಿಯ ಗ್ರಂಥಾಲಯ ಅಥವಾ ವಾಚನಾಲಯ ನಿರ್ವಹಿಸುತ್ತಿರುವುದಿಲ್ಲ

16) **ಸೆಕ್ಷನ್ 4(1) ಬಿ (xvi)** ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು ಪದ ನಾಮಗಳು ಮತ್ತು ಇತರೆ ವಿವರಗಳು.

| ಕ್ರ. ಸಂ | ಸಾರ್ವಜನಿಕ ಮಾಹಿತಿ ಅಧಿಕಾರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಕಲಂ 19(1) ರಂತೆ 1 ನೇ ಮೇಲ್ಮನವಿ ಪ್ರಧಿಕಾರ | ಕಲಂ 19 (1) ರಂತೆ 2 ನೇ ಮೇಲ್ಮನವಿ ಪ್ರಧಿಕಾರ |
|---|---|---|---|---|
| 1 | ಶ್ರೀ ಸಿ.ಹನುಮಂತ ರೆಡ್ಡಿ<br>ಹಿರಿಯ ಭೂ ವಿಜ್ಞಾನಿ<br>ದೂ.9449623034 | ಕು ॥ ದ್ವಿತೀಯ ಭೂವಿಜ್ಞಾನಿ<br>9480220400 | ಶ್ರೀ ಹೆಚ್. ಎಂ. ಖಯೂಂ ಆಲಿ ಅಪರ ನಿರ್ದೇಶಕರು ( ಅಂತರ್ಜಲ)<br>ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಬೆಂಗಳೂರು -560001<br>ದೂ.080-22384134 | ಮುಖ್ಯ ಮಾಹಿತಿ ಆಯುಕ್ತರು<br>ಕರ್ನಾಟಕ ಮಾಹಿತಿ ಆಯೋಗ,<br>ಕಟ್ಟಡ ಸಂ: 302, 3 ನೇ ಮಹಡಿ<br>ವಿಧಾನ ಸೌಧ ಬೆಂಗಳೂರು. |

ಹಿರಿಯ ಭೂವಿಜ್ಞಾನಿಯವರ ಕಛೇರಿ

ಗಣಿ ಮತ್ತು ಭೂವಿಜ್ಞಾನ ಇಲಾಖೆ

ಅಂತರ್ಜಲ ಘಟಕ, ಜಿಲ್ಲಾ ಪಂಚಾಯತ್ ,

ಹಾಸನ- 573 201

# ಮಾಹಿತಿ ಹಕ್ಕು ಅಧಿ  ನಿಯಮ -2005 ರ ನಿಯಮ 4(1) (ಎ)ರನ್ವಯ ಸಿದ್ಧಪಡಿಸಿರುವ ಮಾಹಿತಿ ಪ್ರಕಟಣೆ